**ರವಿ:** ಅಶೋಕ ನಿಮ್ಮ ತಂದೆ ಏನು ಕೆಲಸ ಮಾಡುತ್ತಾರೆ?
**ಅಶೋಕ:** ಜನರ ಕಷ್ಟ ಸುಖಗಳಿಗೆ ಯಾವಾಗಲೂ ಸ್ಪಂದಿಸುತ್ತಾರೆ.
**ರವಿ:** ಹಾಗಾದರೆ ಅವರು ಸಮಾಜ ಸುಧಾರಕರೇ?
**ಅಶೋಕ:** ಹಾಗೇನಿಲ್ಲ ನಮ್ಮ ತಂದೆ ಪೋಸ್ಟ್ ಮ್ಯಾನ್!

**ಸಂತೋಷ:** ರಾಮು ನಮ್ಮನೆ ಟಿ.ವಿ.ಗೆ ನಾಲ್ಕು ಕಂಟ್ರೋಲಿಂಗ್ ಸ್ವಿಚ್‌ಗಳಿವೆ.
**ರಾಮು:** ಆಶ್ಚರ್ಯವಾಗಿದೆಯಲ್ಲ.
**ಸಂತೋಷ:** ಹೌದು ಕಣೋ, ಒಂದು ನನ್ನ ಹೆಂಡತಿ, ಮತ್ತೆ ಮೂರು ನನ್ನ ಮೂರು ಮಕ್ಕಳದ್ದು!

**ಆತ:** ಅಡುಗೆ ಕೆಲಸ, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದರಿಂದ ಬಹಳ ಬೇಸರವಾಗಿ ಮದುವೆ ಮಾಡಿಕೊಂಡೆ.
**ಈತ:** ಹೌದಾ, ನಾನು ಇದೇ ಕೆಲಸಗಳಿಂದ ಬೇಸರವಾಗಿ ನನ್ನಾಕೆಗೆ ಡೈವೋರ್ಸ್ ಕೊಟ್ಟುಬಿಟ್ಟೆ.


**ಕೃಷ್ಣ:** ಶಿವು ನಿಮ್ಮ ಮನೆ ಪಕ್ಕದಲ್ಲಿ ಸೌದೆ ಅಂಗಡಿಗೆ ಬೆಂಕಿ ಬಿದ್ದು ಎಲ್ಲಾ ಹಾಳಾಯ್ತಲ್ಲ, ಈಗ ಅವರು ಏನು ಮಾಡುತ್ತಿದ್ದಾರೆ?
**ಶಿವು:** ಈಗ ಅವರು ಇದ್ದಿಲು ಅಂಗಡಿ ತೆರೆದಿದ್ದಾರೆ.


**ಜನಗಣತಿದಾರ:** ಮೇಡಂ ನಿಮಗೆ ಮೂರು ಮಕ್ಕಳಿವೆ ಅಂತೀರಿ. ಹಾಗಾದರೆ ನಿಮ್ಮ ಈಗಿನ ವಯಸ್ಸು ಎಷ್ಟು?
**ಮನೆಯಾಕೆ:** ನಮ್ಮ ಪಕ್ಕದ ಮನೆಯಾಕೆ ಹೇಳಿದ ವಯಸ್ಸಿನಲ್ಲಿ ಐದು ವರ್ಷ ಕಡಿಮೆ ಬರೆದುಕೊಳ್ಳಿ.
**ಜನಗಣತಿದಾರ:** ಆಕೆ ಹದಿನೆಂಟು ವರ್ಷ ಎಂದು ಬರೆಸಿದ್ದಾಳೆ.

**ರೈಲ್ವೆ ಅಧಿಕಾರಿ:** ಏನ್ರೀ ಒಂದು ಗಂಟೆ ತಡವಾಗಿ ಸಂದರ್ಶನಕ್ಕೆ ಬಂದಿದ್ದೀರಿ?
**ಅಭ್ಯರ್ಥಿ:** ಸರ್ ನಾನು ಬಂದ ರೈಲು ಒಂದು ಗಂಟೆ ತಡವಾಗಿ ಇಲ್ಲಿಗೆ ಬಂದಿತು.



ಒಂದು ವಾರದಿಂದ CCTV ಕ್ಯಾಮೆರಾ ಕೆಟ್ಟು ಹೋಗಿದೆ....



ಹೆಚ್ಚೆಂದ್ರೆ ನಿಮ್ಮಪ್ಪ ಇನ್ನು ಮೂರ್ನಾಕು ದಿನ ಬದುಕಬಹುದು.... ಅಷ್ಟೇ...

**ಆತ:** ಅಲ್ಲ, ನಾವಿಬ್ಬರೇ ಈ ಮಧ್ಯರಾತ್ರಿ ರೈಲಿನಲ್ಲಿ ಪ್ರಯಾಣ ಮಾಡುತ್ತಾ ಇದ್ದೀವಿ. ನನಗೆ ಭಯ ಆಗುತ್ತಿದೆ, ನಿಮಗೆ ಹೆದರಿಕೆ ಆಗೋದಿಲ್ಲವೇ?
**ಈತ:** ನನಗೆ ಯಾವ ಹೆದರಿಕೆಯೂ ಇಲ್ಲ. ನಾನು ಇದೇ ಬೋಗಿಯಲ್ಲಿ ಮುನ್ನೂರು ವರ್ಷಗಳಿಂದಲೂ ಪ್ರಯಾಣ ಮಾಡುತ್ತಲೇ ಇದ್ದೇನೆ!

**ಆತ:** ಇಲ್ಲೊಬ್ಬರು ಪಾದಚಾರಿಗಳ ಸುರಕ್ಷತೆ ಬಗ್ಗೆ ಯಾವಾಗಲೂ ಹೇಳುತ್ತಿದ್ದರಲ್ಲ, ಈಗ ಅವರೆಲ್ಲಿ?
**ಈತ:** ಕಳೆದ ತಿಂಗಳು ರಸ್ತೆ ಅಪಘಾತದಲ್ಲಿ ತೀರಿಹೋದರು.

**ಗ್ರಂಥಪಾಲಕ:** ಅಲ್ಲ, ನೀವು ಯಾವಾಗಲೂ ಗಾಂಧೀಜಿ ಪುಸ್ತಕಗಳನ್ನೇ ಕೇಳುತ್ತೀರಲ್ಲ? ನಿಮಗೆ ಅವರನ್ನು ಕಂಡರೆ ಅಷ್ಟು ಅಭಿಮಾನವೇ?
**ಓದುಗ:** ಹಾಗೇನಿಲ್ಲ ಒಮ್ಮೆ ಗಾಂಧೀಜಿ ಪುಸ್ತಕದಲ್ಲಿ ಐನೂರು ರೂಪಾಯಿ ಸಿಕ್ಕಿತ್ತು!

**ತಂದೆ:** ಏನಮ್ಮ ಸವಿತಾ ನಿನ್ನ ಅಮ್ಮ ಇವತ್ತು ಏನೊಂದು ಮಾತನಾಡುತ್ತಿಲ್ಲವಲ್ಲ, ಏನಾದರೂ ಮೌನಗೌರಿ ವ್ರತ ಆಚರಿಸುತ್ತಿರುವಳೇ?
**ಮಗಳು:** ಇಲ್ಲಪ್ಪ, ಅವರು ಈಗ ತಾನೆ ತುಟಿಗೆ ಲಿಪ್‌ಸ್ಟಿಕ್ ಹಾಕಿಕೊಂಡಿದ್ದಾರೆ.

**ಲಲಿತಾ:** ಸ್ಮಿತಾ ನನ್ನ ಮಗನನ್ನು ವಕೀಲನನ್ನಾಗಿ ಮಾಡಬೇಕು ಅಂತ ಯೋಚನೆ ಮಾಡುತ್ತಿದ್ದೇನೆ.
**ಸ್ಮಿತಾ:** ಯಾಕೆ ವಕೀಲನನ್ನಾಗಿಯೇ ಮಾಡಬೇಕು?
**ಲಲಿತಾ:** ನಮ್ಮ ಯಜಮಾನರು ಉಪಯೋಗಿಸದ ಒಂದು ಕಪ್ಪು ಕೋಟು ಇದೆ. ಅದರ ಉಪಯೋಗವಾದರೂ ಆಗಲಿ ಅಂತ.

**ಪ್ರಿಯಕರ:** ನಿನಗೆ ಅಡುಗೆ ಮಾಡಲು ಬರುತ್ತದೆಯೇ?
**ಪ್ರೇಯಸಿ:** ಈ ಪ್ರಶ್ನೆ ನಿಮ್ಮದಲ್ಲ, ನನ್ನದು.

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**